<u>ಓ.ಎಸ್. ನಂ.53/2016ರಲ್ಲಿ</u>
ಪಿ.ಡಬ್ಲ್ಯೂ-1(ಎಂ.ಎ.ಷರೀಫ್)

ದಿನಾಂಕ 18-10-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ ಆರ ಜಿ ವಕೀಲರಿಂದಃ-</u>

ಸ.ನಂ.60/2ರ ಸಂಬಂದ OS 156/2013ರ ದಾವೆಯನ್ನು ನನ್ನ ವಿರುದ್ಧ ಲಿಂಗಯ್ಯರವರು ಸಲ್ಲಿಸಿದ್ದರು ಅಂದರೆ ಹಾಕಿರಬಹುದು ಎಂದು ನುಡಿಯುತ್ತಾರೆ. ದೊಡ್ಡೇರಿ ಗ್ರಾಮದ ಕೆಲವು ಸರ್ವೆ ನಂಬರ ಗಳನ್ನು ಕರಾರು ಪತ್ರ ಮಾಡಿಕೊಂಡು ನಂತರ ರದ್ದು ಮಾಡಿಕೊಂಡೆ ಅಂದರೆ ಸರಿ, ಕಾರಣ ರಸ್ತೆ ಇರಲಿಲ್ಲ. ಲೇಔಟ್ ಅನಾನುಕೂಲ ಆದ್ದರಿಂದ ಕರಾರನ್ನು ರದ್ದುಪಡಿಸಿಕೊಂಡೆ ಅಂದರೆ ಸರಿಯಲ್ಲ. ಕ್ರಯಪತ್ರವನ್ನು ಎಸ್ ಆರ್ ವ್ಯಾಲ್ಯೂಯೇಷನ್ ಗೆ ಮಾತ್ರ ನೋಂದಾಯಿಸಕೊಳ್ಳಬೇಕು ಅಂದರೆ ಹಾಗೇನಿಲ್ಲ ಎಂದು ನುಡಿಯುತ್ತಾರೆ. ಪತ್ರವನ್ನು ನೋಂದಣಿ ಮಾಡಿಕೊಳ್ಳುವ ಬೆಲೆಗಿಂತ ಜಾಸ್ತಿ ವ್ಯವಹಾರ ಹೊರಗೆ ಆಗುತ್ತದೆ ಅಂದರೆ ಸರಿಯಲ್ಲ. ಈ ಹಿಂದೆ ನನಗೆ ಪಾಟಿ ಸವಾಲಿನ ಕಾಲಕ್ಕೆ ನನಗೆ ತೋರಿಸಿ ಗುರುತಿಸಿರುವ ನಿಡಿ ದಾಖಲೆಗಳಲ್ಲಿ ಕ್ರಯದ ಹಣ 11 ಲಕ್ಷದ ಮೇಲಿದೆ. ಸ.ನಂ.75/1 5 ಎಕರೆ 15 ಗುಂಟೆ , ಸ.ನಂ.76/23ರಲ್ಲಿ 9 ಗುಂಟೆಯನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದೇನೆಂದರೆ ಸರಿ, ಸಾಕ್ಷಿ ಒಪ್ಪಿದ್ದರಿಂದ ಅದನ್ನು **ನಿಡಿ 43** ಎಂದು ಗುರುತಿಸಲಾಯಿತು. ಅದರಂತೆ ಮ್ಯುಟೇಷನ್ ಸಹ ಆಗಿದೆ ಅಂದರೆ ಸರಿ, ಅದನ್ನು **ನಿಡಿ 44** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 200 ರೂ ಕಾಸ್ಟ ನೊಂದಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.